# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 34/2025

**ಪಿ.ಡಬ್ಲ್ಯೂಃ8 (ಸಿಡಬ್ಲ್ಯೂಃ7 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ತರಸಾಲಪ್ಪ** |
| **ತಂದೆಯ ಹೆಸರು** | : | **ಸಿದ್ದಪ್ಪ** |
| **ವಯಸ್ಸು** | : | **44 ವರ್ಷ** |
| **ಕೆಲಸ** | : | **ವ್ಯವಸಾಯ** |
| **ವಾಸ ಸ್ಥಳ** | : | **ಕುರುವಳ್ಳಿ ಗ್ರಾಮ** |

**ಸಾಕ್ಷಿಯನ್ನು ದಿನಾಂಕ 11.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೂಕಮ್ಮ ನನ್ನ ಚಿಕ್ಕಮ್ಮ. ಆರೋಪಿಯ ಪರಿಚಯ ಇದೆ. ಆತ ನಮ್ಮ ಊರಿನವನು. ನನ್ನ ಮತ್ತು ಮೂಕಮ್ಮಳ ಮನೆ ಅಕ್ಕಪಕ್ಕದಲ್ಲಿ ಇದೆ.

**2.** ಈಗ್ಗೆ 1 ವರ್ಷದ ಹಿಂದೆ ಆರೋಪಿಯು ಮದ್ಯಪಾನ ಮಾಡಿ ಬಂದು ಮೂಕಮ್ಮಳ ಮನೆಯ ಹತ್ತಿರ ಗಲಾಟೆ ಮಾಡುತ್ತಿದ್ದನು. ಆಗ ಮೂಕಮ್ಮ ನಮ್ಮ ಮನೆಯ ಹತ್ತಿರ ಬರಬೇಡ ಎಂದು ಆರೋಪಿಗೆ ಹೇಳಿದಳು. ಆಗ ಸುಮಾರು ರಾತ್ರಿ 10.30 ಗಂಟೆ

ಆಗಿರಬಹುದು. ನಮ್ಮ ಹತ್ತಿರ ಬರಬೇಡ ಎಂದು ಹೇಳಿದಾಗ ಆತ ತನ್ನ ಮನೆಯ ಹತ್ತಿರ ಹೋದನು. ನಂತರ ಈಳಿಗೆ ಮಣೆ ತೆಗೆದುಕೊಂಡು ಪುನಃ ಮೂಕಮ್ಮನ ಮನೆಯ ಹತ್ತಿರ ಬಂದು ಜಗಳ ತೆಗೆದು ಈಳಿಗೆ ಮಣೆಯಿಂದ ಮೂಕಮ್ಮಳಿಗೆ ಹೊಡೆದಿದ್ದಾನೆ. ಇದರಿಂದ ಮೂಕಮ್ಮಳ ಕೈಗೆ ಮತ್ತು ಹಣೆಗೆ ಪೆಟ್ಟಾಯಿತು.

**3.** ನಾನು ಮತ್ತು ಉಮೇಶ ಜಗಳ ಬಿಡಿಸಿದ್ದೇವೆ. ಮೂಕಮ್ಮಳನ್ನು ಸಿರುಗುಪ್ಪ ಸರ್ಕಾರಿ ಆಸ್ಪತ್ರೆಗೆ ಆಟೋರಿಕ್ಷಾದಲ್ಲಿ ಕರೆದುಕೊಂಡು ಹೋಗಿರುತ್ತೇವೆ. ವೈದ್ಯರು ಮೂಕಮ್ಮಳಿಗೆ ಬಹಳ ಗಾಯಗಳು ಆಗಿರುವುದರಿಂದ ಬಳ್ಳಾರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದಾರೆ. ನಾನು ಮತ್ತು ಉಮೇಶ ಸೇರಿಕೊಂಡು ಮೂಕಮ್ಮಳನ್ನು ಬಳ್ಳಾರಿಯ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದೇವೆ. ಮೂಕಮ್ಮ ಸುಮಾರು 1 ತಿಂಗಳ ಕಾಲ ಬಳ್ಳಾರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

**4.** ಆರೋಪಿಯು ಮೂಕಮ್ಮಳಿಗೆ ಹೊಡೆಯಲು ಉಪಯೋಗಿಸಿದ ಈಳಿಗೆ ಮಣೆಯನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಎಂಒ 2 ಎಂದು ಗುರುತಿಸಲಾಗಿದೆ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿದ್ದಾರೆ .

**ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್.ಆರ್.ಜೆಃ(ಎಲ್ ಎ ಡಿಸಿ) ವಕೀಲರಿಂದ:**

**5.** ನನ್ನ ಮತ್ತು ನನ್ನ ಚಿಕ್ಕಮ್ಮಳ ಮನೆಯ ನಡುವೆ ಒಂದು ಗೋಡೆ ಮಾತ್ರ ಇದೆ. ನಾನು ಮನೆಯಲ್ಲಿದ್ದಾಗ ಆರೋಪಿ ಬೈದಿದ್ದು ನನಗೆ ಕೇಳಿಸಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ಬೈಯ್ಯುವುದನ್ನು ನಾನು ಕೇಳಿಸಿಕೊಂಡಿದ್ದೇನೆ. ಸಿರುಗುಪ್ಪ ಆಸ್ಪತ್ರೆ ತಲುಪಿದಾಗ ರಾತ್ರಿ ಸುಮಾರು 11.00 ರಿಂದ 12.00 ಗಂಟೆ ಆಗಿರಬಹುದು. ಮೂಕಮ್ಮಳ ಮನೆಯಿಂದ ಸಿರುಗುಪ್ಪ ಆಸ್ಪತ್ರೆ ಸುಮಾರು 8-10 ಕಿಮಿ ದೂರ ಇಬಹುದು.

**6.** ಎಂಒ 2 ರಂತಹ ಈಳಿಗೆ ಮಣೆ ಎಲ್ಲರ ಮನೆಯಲ್ಲಿಯು ಸಿಗುತ್ತದೆ. ಮೂಕಮ್ಮ ಕತ್ತಲಿನಲ್ಲಿ ಬಿದ್ದು ಗಾಯಗೊಂಡಿದ್ದರಿಂದ ನಾವು ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ ಎನ್ನುವುದು ಸರಿಯಲ್ಲ.

7. ಈ ಪ್ರಕರಣದ ಘಟನೆಗಿಂತ ಮೊದಲು ಆರೋಪಿ ನಮ್ಮ ಓಣಿಯಲ್ಲಿ ಬೇರೆಯವರಿಗೆ ತೊಂದರೆ ಕೊಟ್ಟಿಲ್ಲ. ಆರೋಪಿ ವಾಸಿಸುವ ಮನೆ ಮತ್ತು ಮೂಕಮ್ಮ ಇರುವ ಓಣಿ ದೂರದಲ್ಲಿ ಇದೆ ಎನ್ನುವುದು ಸರಿ . ಆರೋಪಿಗೆ ನಮ್ಮ ಓಣಿಯ ಕಡೆ ಬರಲು ಯಾವುದೇ ಕಾರಣಗಳು ಇಲ್ಲ ಎನ್ನುವುದು ಸರಿ . ಮೂಕಮ್ಮ ತಾನೇ ಬಿದ್ದು ಗಾಯಗೊಂಡಿದ್ದು ಆರೋಪಿಯ ವಿರುದ್ಧ ಒಂದು ಸುಳ್ಳು ಪ್ರಕರಣ ದಾಖಲು ಮಾಡಿದ್ದು ಸದರಿ ಫಿರ್ಯಾದಿಗೆ ಪೂರಕವಾಗಿ ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**S.C.No.34/2025**
**P.W. 8 (C.W.7 )**
**Date : 11.02.2026**

**8.** ಆರೋಪಿ ಹೌಸಿಂಗ್ ಬೋರ್ಡ್ ಮನೆಯಲ್ಲಿ ವಾಸಿಸುತ್ತಾನೆ . ಆತನನ್ನು ಸದರಿ ಮನೆಯಿಂದ ಬಿಡಿಸಲು ಎಲ್ಲರೂ ಪ್ರಯತ್ನಿಸುತ್ತಿದ್ದಾರೆ ಎನ್ನುವುದು ಸರಿ. ನಾವು ಗ್ರಾಮಸ್ಥರು ಆತನನ್ನು ಮನೆಯಿಂದ ಬಿಡಿಸಲು ಬಹಳ ಪ್ರಯತ್ನಿಸುತ್ತಿದ್ದೇವೆ ಎನ್ನುವುದು ಸರಿ .

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**